5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ
(ಪೀಠಾಸೀನ, ಸಾಗರ)
ಎಸ್.ಸಿ. ಸಂ:10011/2021

ಪಿಡಬ್ಲ್ಯೂ 03
ಸಿಡಬ್ಲ್ಯೂ 03

ಸಾಕ್ಷಿ ಹೆಸರು - ಗಂಗಾಧರಪ್ಪ ಎನ್ ಸಿ
ತಂದೆ ಹೆಸರು - ಚನ್ನಬಸಪ್ಪಗೌಡ
ವಯಸ್ಸು - 57 ವರ್ಷ
ಉದ್ಯೋಗ - ವ್ಯವಸಾಯ
ವಿಳಾಸಃ - ನಂದಿಗೋಡು , ಆತವಾಡಿ ಗ್ರಾಮ, ಸಾಗರ ತಾಲ್ಲೂಕು.

ಪ್ರಮಾಣ ವಚನ ಭೋದಿಸಿದ ದಿನಾಂಕಃ 26-03-2022.

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ನನಗೆ ಚಾಸಾ-1 , 2 ಮತ್ತು 4 ರವರು ಗೊತ್ತು . ಆರೋಪಿತರು ಗೊತ್ತು. ಚಾಸಾ-1 ರವರಿಗೆ ಪೆಟ್ಟಾದ ವಿಷಯ ನನಗೆ ಗೊತ್ತು . ದಿನಾಂಕಃ13-03-2016 ರಂದು ಸಂಜೆ 5-30 ಗಂಟೆ ಸುಮಾರಿಗೆ ನಾನು ಸಾಗರದ ಸರ್ಕಾರಿ ಆಸ್ಪತ್ರೆಯ ಎದುರಿಗೆ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಚಾಸಾ-1 ರವರ ಅಣ್ಣ ಸದಾಶಿವಪ್ಪ ನನಗೆ ಸಿಕ್ಕಿದ್ದರು , ನಾನು ಅವರನ್ನು ಮಾತನಾಡಿಸಿದೆನು. ಈ ದಿನ ಬೆಳಿಗ್ಗೆ 11-30 ಗಂಟೆ ಸುಮಾರಿಗೆ ನನ್ನ ಇನ್ನೊಬ್ಬ ತಮ್ಮ ಕೇಶವಮೂರ್ತಿ ಮತ್ತು ಅವನ ಹೆಂಡತಿ ಮಮತಾ ಮತ್ತು ಅಕ್ಕನ ಮಗ ರವೀಂದ್ರ ಇವರೆಲ್ಲರೂ ಸೇರಿ ಚಾಸಾ-1 ರವರಿಗೆ ಹಲ್ಲೆ ಮಾಡಿದ್ದಾರೆ , 2 ನೇ ಆರೋಪಿ ಮಮತಾ ಬಂದೂಕಿನಿಂದ ಗುಂಡು ಹಾರಿಸಿದ್ದಾರೆ , ಚಾಸಾ-1 ರವರನ್ನು ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲು ಮಾಡಿದ್ದೇನೆ ಎಂದು ಹೇಳಿದರು. ನಾನು ಆಸ್ಪತ್ರೆಗೆ ಹೋಗಿ ಚಾಸಾ-1 ರವರನ್ನು ನೋಡಿ ಮಾತನಾಡಿಸಿದೆನು. ಚಾಸಾ-1 ರವರು ಎಮರ್ಜೆನ್ಸಿ ವಾರ್ಡ್ ನಲ್ಲಿ ಒಳರೋಗಿಯಾಗಿ ದಾಖಲಾಗಿದ್ದರು , ಅವರ ಎಡಗಾಲಿನ ತೊಡೆಗೆ ಬ್ಯಾಂಡೇಜ್ ಸುತ್ತಿದ್ದರು. ನಾನು ಚಾಸಾ-1 ರವರನ್ನು ವಿಚಾರಿಸಿದಾಗ ಸದಾಶಿವಪ್ಪ ನನ್ನ ಮುಂದೆ ಹೇಳಿದ್ದ ವಿಚಾರಗಳನ್ನೇ ಅವರೂ ಸಹ ನನಗೆ ಹೇಳಿದರು. ನನ್ನನ್ನು ಕೊಲೆ ಮಾಡುವ ಉದ್ದೇಶದಿಂದ ಬಂದೂಕಿನಿಂದ ಗುಂಡು ಹಾರಿಸಿ ಗಾಯಪಡಿಸಿ ಹಲ್ಲೆ ಮಾಡಿದ್ದಾರೆ ಎಂದು ತಿಳಿಸಿದರು. ನಂತರ ನಾನು ಮನೆಗೆ ಹೋದೆನು.

ದಿನಾಂಕಃ15-03-2016 ರಂದು ಚಾಸಾ-1 ರವರಿಗೆ ಹೆಚ್ಚಿನ ಚಿಕಿತ್ಸೆಗೆ ವೈದ್ಯರು ಶಿವಮೊಗ್ಗ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ತಿಳಿಸಿದ್ದರಿಂದ ನಾನು ಮತ್ತು ಸದಾಶಿವಪ್ಪ ಸೇರಿ ಚಾಸಾ-1 ರವರನ್ನು ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಗೆ ದಾಖಲಿಸಿ ನಾನು ವಾಪಾಸ್ಸು ಬಂದೆನು. ಚಾಸಾ-4 ರವರು ಅವನ ಯೋಗಕ್ಷೇಮವನ್ನು ನೋಡಿಕೊಳ್ಳುತ್ತ ಅಲ್ಲಿಯೇ ಇದ್ದರು. ಚಾಸಾ-1 ರವರು ದೂರು ಕೊಟ್ಟ ನಂತರ ಪೋಲೀಸರು ನನ್ನನ್ನು ವಿಚಾರಣೆ ಮಾಡಿದ್ದಾರೆ . ನಾನು ಅವರ ಮುಂದೆ ಹೇಳಿಕೆ ನೀಡಿರುತ್ತೇನೆ. ಆ ದಿನ ಚಾಸಾ-1 ರವರೊಂದಿಗೆ ಗಲಾಟೆ ಮಾಡಿ ಹಲ್ಲೆ ಮಾಡಿದ ಆರೋಪಿತರು ನ್ಯಾಯಾಲಯದ ಮುಂದಿರುತ್ತಾರೆ. ಘಟನೆ ಬಗ್ಗೆ ನಾನು ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಈ ಎನ್ ವಕೀಲರಿಂದಃ</u>

ಶ್ರೀ ಈ ಎನ್ ವಕೀಲರು ಗೈರು ಹಾಜರು ಇದ್ದು ಶ್ರೀ ಕೆ ಆರ್ ಎಸ್ ವಕೀಲರು ಈ ಎನ್ ವಕೀಲರ ಪರವಾಗಿ ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿರುತ್ತಾರೆ . ಕಾಲಾವಕಾಶ ನೀಡಲು ಯಾವುದೇ ಸಕಾರಣಗಳು ಇರುವುದಿಲ್ಲ , ಆದ್ದರಿಂದ ಪಾಟೀಸವಾಲು ಏನೂ ಇಲ್ಲ ಎಂದು ಪರಿಗಣಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).